**DW-1** OS154/2019

<u>**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**</u>

<u>**ಅಸಲು ದಾವೆ. ಸಂಖ್ಯೆ:154/2019**</u>

**ಡಿ.ಡಬ್ಲೂ:01 ಶ್ರೀ ಚಂದ್ರಪ್ಪ**

**ಸಾಕ್ಷಿಯನ್ನು ದಿನಾಂಕಃ 03-08-2026 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

<u>**ಪಾಟೀಸವಾಲು ಃ ವಾದಿಯ ಪರ ಶ್ರೀ.ಪಿ ಆರ್ ವಕೀಲರಿಂದ**</u>

1. 1ನೇ ಪ್ರತಿವಾದಿಯು ನನ್ನ ಬಾಮ್ಮೈದರಾಗಿರುತ್ತಾರೆ. 2ನೇ ಪ್ರತಿವಾದಿ ನನಗೆ ಸಂಬಂದಿಕರಾಗಿರುವುದಿಲ್ಲ. ನನ್ನ ತಾತನವರ ಹೆಸರು ಮುನಿವೆಂಕಟಪ್ಪ ಎಂದಾಗಿದ್ದು ಅವರ ಹೆಂಡತಿ ಹೆಸರು ನಲ್ಲಮ್ಮ ಎಂದಾಗಿರುತ್ತದೆ. ನನಗೆ ದಾವಾ ಆಸ್ತಿಯ ಖಾತಾ ನಂಬರ್ ಗೊತ್ತಿದ್ದು ಅದು 154 ಆಗಿರುತ್ತದೆ. ನನ್ನ ಪ್ರಕಾರ ಸದರಿ ದಾವಾ ಆಸ್ತಿಯು ನಿವೇಶನವಾಗಿದ್ದು ಅದರ ವಿಸ್ತೀರ್ಣ 53 x 53 ಅಡಿ ಆಗಿರುತ್ತದೆ. ಸದರಿ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿದ್ದು, ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಒಬ್ಬ ಮುಸ್ಲಿಂ ರವರ ಆಸ್ತಿ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಇನ್ನೊಬ್ಬ ಮುಸ್ಲಿಂ ರವರ ಆಸ್ತಿ ಇರುತ್ತದೆ. ನನ್ನ ಪ್ರತಿವಾದ ಪತ್ರದಲ್ಲಿ ನಾನು ಖಾತಾ ನಂ.154 ನಮೂದು ಮಾಡಿರುತ್ತೇನೆ. ಸದರಿ ಮೇಲೆ ಹೇಳಿದ ವಿಸ್ತೀರ್ಣವು ಖಾತಾ ನಂ.154ಕ್ಕೆ ಸಂಬಂದಿಸಿದ್ದು ಅದನ್ನು ನನ್ನ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿರುತ್ತೇನೆ.

2. ನನ್ನ ಪ್ರಕಾರ ಖಾತಾ ನಂ.154 ಮೂಲತಃ ನನ್ನ ತಾತನಾದ ಮುನಿವೆಂಕಟಪ್ಪನವರಿಗೆ ಸೇರಿದ್ದಾಗಿರುತ್ತದೆ. ಸದರಿ ನನ್ನ ತಾತನವರಿಗೆ ಖಾತಾ ನಂ.154 ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ ಖಾತಾ ನಂ.154ಕ್ಕೆ ಸಂಬಂದ ಪಟ್ಟಂತೆ ದಾಖಲೆಗಳನ್ನು ನಾನು ನೋಡಿದ್ದು ಅವುಗಳು ನನ್ನ ತಾತನಾದ ಮುನಿವೆಂಕಟಪ್ಪರವರ ಹೆಸರಿನಲ್ಲಿ ಇರುತ್ತದೆ. ಸದರಿ ಮುನಿವೆಂಕಟಪ್ಪನವರಿಗೆ 4 ಮಕ್ಕಳಿದ್ದು 2 ಗಂಡು ಮತ್ತು 2 ಹೆಣ್ಣುಮಕ್ಕಳಿರುತ್ತಾರೆ. ಅವರುಗಳ ಹೆಸರುಗಳು ಲಕ್ಷ್ಮಮ್ಮ ಗೋವಿಂದಪ್ಪ, ಮುನಿಕೃಷ್ಣಪ್ಪ ಮತ್ತು ಚಿನ್ನಪಾಪಮ್ಮ ಎಂದಾಗಿರುತ್ತದೆ. ಸದರಿ 4 ಮಂದಿ ಕೂಡ ಈಗಾಗಲೇ ಮರಣ ಹೊಂದಿರುತ್ತಾರೆ. ಸದರಿ ನನ್ನ ತಾತನವರ 4 ಮಕ್ಕಳಿಗೂ ಕೂಡ ಮದುವೆ ಆಗಿ ಕುಟುಂಬ ಇರುತ್ತದೆ. ನನ್ನ ತಾಯಿ ಆದ ಲಕ್ಷ್ಮಮ್ಮ ರವರಿಗೆ ನಾನು ಒಬ್ಬನೇ ಮಗ. ನನ್ನ ತಾತನವರು ಯಾವ ಇಸವಿಯಲ್ಲಿ ಮರಣ ಹೊಂದಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ತಾತನವರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಸದರಿ ಮುನಿವೆಂಕಟಪ್ಪರವರಿಗೆ ಇಬ್ಬರು ಒಡಹುಟ್ಟಿದವರು ಇದ್ದು ಅವರುಗಳ ಹೆಸರುಗಳು, ಪೆದ್ದಮುನಿವೆಂಕಟಪ್ಪ ಮತ್ತು ಚಿನ್ನಪ್ಪ ಎಂದಾಗಿರುತ್ತದೆ.

3. ಸದರಿ ನನ್ನ ತಾತ ಮತ್ತು ಅವರ ಇಬ್ಬರು ಒಡಹುಟ್ಟಿದವರು ಕೂಡ ಮರಣ ಹೊಂದಿರುತ್ತಾರೆ. ಮುನೇಕ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಮುನೇಕರವರು ಮುನಿಯಪ್ಪವರ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ನಾನು ಆಸ್ತಿಯು ಮುನಿಯಪ್ಪರವರ ಹೆಂಡತಿ ಆದ ಮುನೇಕರವರಿಗೆ ಸೇರಿದ್ದು ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ಸದರಿ ಮುನೇಕ ರವರಿಗೆ ಎಷ್ಟು ಮಂದಿ ಮಕ್ಕಳು ಎಂದು ನನಗೆ

ಗೊತ್ತಿಲ್ಲ. ಸದರಿ ಮುನೇಕ ಮತ್ತು ಮುನಿಯಪ್ಪರವರ ಆಸ್ತಿಗೂ ನನಗೂ ಸಂಬಂದ ಇದೆಯಾ ಎಂದರೆ ಇಲ್ಲ. ಸಾಕ್ಷಿಯು ಮುಂದುವರೆದು ಚಿಕ್ಕ ಮುನಿವೆಂಕಟಪ್ಪರವರ ಆಸ್ತಿಗೂ, ನನಗೂ ಸಂಬಂದ ಇದೆ ಎನ್ನುತ್ತಾರೆ. ನಾನು ಇಲ್ಲಿಯವರೆಗೆ ಮೇಲೆ ಹೇಳಿದಂತೆ ನನ್ನ ತಾತನಾದ ಮುನಿವೆಂಕಟಪ್ಪರವರಿಗೆ ಯಾವ ರೀತಿ ಆಸ್ತಿ ಬಂತು ಎಂಬುವುದನ್ನು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಬೀಮಣ್ಣರವರನ್ನು ನೋಡಿರುವುದಿಲ್ಲ. ವಾದಿಗಳು ನನಗೆ ಯಾರು ಎಂದು ಗೊತ್ತಿಲ್ಲ. ವಾದಿಗಳು ತಮ್ಮ ವಾದ ಪತ್ರದಲ್ಲಿ ದಾವಾ ಆಸ್ತಿಯು ಅವರಿಗೆ ಯಾವ ರೀತಿ ಬಂತು ಎಂದು ನಮೂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

4. ಖಾತಾ ನಂ.73 ಮತ್ತು 74 ಬೇತಮಂಗಲದಲ್ಲಿ ಇದ್ದು ಅದಕ್ಕೂ ನನಗೂ ಯಾವುದೇ ಸಂಬಂದ ಇದೆಯಾ ಎಂದರೆ ಇಲ್ಲ. ವಾದ ಪತ್ರದಲ್ಲಿ ನಮೂದು ಮಾಡಿದ ಚೆಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಜಲೀಲ್ ಸಾಬಿ ಮತ್ತು ರಾಮಯ್ಯರವರ ಆಸ್ತಿ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ತೇಜೇಗೌಡರ ಆಸ್ತಿಗೂ ನನಗೂ ಸಂಬಂದ ಇದೆಯಾ ಎಂದರೆ ಇಲ್ಲ. ದಾವಾ ಆಸ್ತಿಯಾದ ಖಾತಾ ನಂ.73, 74 ಬೇರೆ ಮತ್ತು ಖಾತಾ ನಂ.154 ಬೇರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎರಡೂ ಒಂದೇ ಎನ್ನುತ್ತಾರೆ. ಖಾತಾ ನಂ.154 ಕ್ಕೂ ನನ್ನ ತಾತನಿಗೂ, ನನಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಆದ ಖಾತಾ ನಂ.73 ಮತ್ತು 74 ನ್ನು ಬೀಮಣ್ಣರವರು ಖರೀದಿ ಮಾಡಿದ್ದು ಅವರ ನಂತರ 1 ರಿಂದ 4 ನೇ ವಾದಿಗಳು ಅದರಲ್ಲಿ ಸ್ವಾದೀನತೆಯನ್ನು ಹೊಂದಿದ್ದು ನನಗೂ ಆ ಆಸ್ತಿಗೂ ಯಾವುದೇ ಸಂಬಂದ ಇಲ್ಲ ಮತ್ತು ನನ್ನ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿದ ಆಸ್ತಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

5. ಈ ದಾವೆಯ ಬಗ್ಗೆ 1 ನೇ ಪ್ರತಿವಾದಿಯವರು ನನಗೆ ಮಾಹಿತಿ ನೀಡಿರುತ್ತಾರೆ. ಸದರಿ 1 ನೇ ಪ್ರತಿವಾದಿಯು ಹೇಳಿದ ನಂತರ ನಾನು ನನ್ನ ವಕೀಲರ ಮೂಲಕ ಅರ್ಜಿಯನ್ನು ಹಾಕಿ ಈ ದಾವೆಯಲ್ಲಿ ಸೇರ್ಪಡೆ ಗೊಂಡಿದ್ದೇನೆ ಎಂದರೆ ಸರಿ. ಈ ದಿನ 1 ನೇ ಪ್ರತಿವಾದಿಯು ಹಾಗೂ 2 ನೇ ಪ್ರತಿವಾದಿಯು ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಹೌದು. ದಾವಾ ಆಸ್ತಿಯು ವಾದಿಗಳಿಗೆ ಸೇರಿದ್ದು ಆ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**